| | |
|---|---|
| 1982-83 | ರೂ. 581,030-00 |
| 1983-84 | ರೂ. 8.19,530-00 |
| 1984-85 | ರೂ. 9.32,530-00 |
| 1985-86 | ರೂ. 9.64.745-00 |
| 1986-87 | ರೂ. 11,28,148-00 |
| 1987-88 | ರೂ. 6,78,115-00 |
| 1988-89 | ರೂ. 10,09,772-00 |
| 1989-90 | ರೂ. 10,13,459-00 |
| 1990-91 | ರೂ. 11,02,160-00 |

ಆ) ದೇವಸ್ಥಾನದ ಆದಾಯವು ಇದಕ್ಕೆ ಭೇಟಿ ನೀಡುವ ಭಕ್ತಾಧಿಗಳು "ಯಾತ್ರಾರ್ಥಿಗಳ ಸಂಖ್ಯೆ" ಮೇಲೆ ಮತ್ತು ಅವರು ಸಲ್ಲಿಸುವ ಪ್ರೂಜೆ ಸೇವೆಗಳ ಮೇಲೆ ಅವಲಂಭಿಸಿರುತ್ತದೆ. ಸಾಮಾನ್ಯವಾಗ ಈ ವರ್ಷಗಳಲ್ಲಿ ದೇವಸ್ಥಾನದ ಆದಾಯವು ವಿರಿಕೆಯಲ್ಲಿರುತ್ತದೆ. ಮತ್ತು 1987-88 ರ ಆದಾಯದಲ್ಲಿ ಸ್ವಲ್ಪ ಇಳಿಮುಖವಾಗಿರುತ್ತದೆ. ಇದು ಆ ವರ್ಷದಲ್ಲಿ ಕಡಿಮೆ ಸಂಖ್ಯೆಯ ಯಾತ್ರಾರ್ಥಿಗಳ ಭೇಟಿಯಿಂದ ಉಂಟಾಗಿರುತ್ತದೆ.

ಇ) ನೌಕರರಿಗೆ ವೇತನ ಮತ್ತು ಭತ್ಯೆ ನೀಡಿರುವ ವಿವರಗಳು ಕೆಳಕಂಡತಿದೆ:

| | |
|---|---|
| 1982-83 | ರೂ. 70.000-00 |
| 1983-84 | ರೂ. 35,000-00 |
| 1984-85 | ರೂ. 1,20.000-00 |
| 1995-86 | ರೂ. 1.30,000-00 |
| 1986-87 | ರೂ. 1,45,000-00 |
| 1987-88 | ರೂ. 1.60,000-00 |
| 1988-89 | ರೂ. 1,76,427-00 |
| 1989-90 | ರೂ. 2,55,905-00 |
| 1990-91 | ರೂ. 2,85,806-00 |

ಈ) ಇಲ್ಲ

ಉ) ಧಾರ್ಮಿಕ ದತ್ತಿ ಆಯುಕ್ತರು ವೇತನ ನಿಗಧಿ ಪಡಿಸಿರುತ್ತಾರೆ.

ಊ) ಸರ್ಕಾರದ ಗಮನಕ್ಕೆ ಈ ಹಿಂದೆ ಬಂದಿರುತ್ತದೆ ಮತ್ತು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲವೆಂದ ಭಾವಿಸಲಾಗಿದೆ.

**ಧರ್ಮವೀರ ತೋಟಗಾರಿಕೆ ಕ್ಷೇತ್ರಕ್ಕೆ ದಿನಗೂಲಿ ನೌಕರರನ್ನು ನೇಮಕ**

3667 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಿವಳ್ಳಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶ್ರೀ ಧರ್ಮವೀರ ತೋಟಗಾರಿಕೆ ಕ್ಷೇತ್ರದಲ್ಲಿ 1971 ರಿಂದ ಇಲ್ಲಿಯವರೆಗೆ ಎಷ್ಟು ಜನ ದಿನಗೂಲಿ ನೌಕರರನ್ನು ನೇಮಿಸಲಾಗಿದೆ.*

ಆ) *ಈ ದಿನಗೂಲಿ ನೌಕರರಲ್ಲಿ ಇಲ್ಲಿಯವರೆಗೆ ಯಾರನ್ನಾದರೂ ಖಾಯಂ ಗೊಳಿಸಲಾಗಿದೆಯೇ (ಹಾಗಿದ್ದ ಪಕ್ಷದಲ್ಲಿ ವಿವರಣೆ ನೀಡುವುದು)*

ಇ) *ಹಾಗಾಗಿದ್ದ ಪಕ್ಷದಲ್ಲಿ ಕಾರಣವನ್ನು ತಿಳಿಸುವುದು?*

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):

ಅ) 1971ರಿಂದ ಇಲ್ಲಿಯವರೆಗೆ 42 ಜನ ದಿನಗೂಲಿ ನೌಕರರನ್ನು ನೇಮಕ ಮಾಡಲಾಗಿದೆ.

ಆ) ಈ ಪೈಕಿ 33 ಜನ ದಿನಗೂಲಿ ನೌಕರರನ್ನು ದಿನಾಂಕ 1-1-90 ರಿಂದ ಖಾಯಂಗೊಳಿಸಲಾಗಿದೆ.

ಶ್ರೀಯುತರು : ಶ್ರೀಮತಿ

1. ರಾಮನಾಯಕ್
2. ಸಣ್ಣ ರಾಮನಾಯಕ್
3. ರಾಮಚಂದ್ರನಾಯಕ್
4. ತೊಳಚಾನಾಯಕ್
5. ಸೇವಾನಾಯಕ್
6. ಬಿ.ಜಯಮ್ಮ
7. ಮರಿಯಮ್ಮ
8. ನಿಂಗಮ್ಮ
9. ಗೌರಮ್ಮ
10. ರಂಗಸ್ವಾಮಯ್ಯ ತಂದೆ ಬೋರಣ್ಣ
11. ಬಿ. ಶಿವಣ್ಣ
12. ಕರಿಯಮ್ಮ
13. ಗೋವಿಂದನಾಯಕ್
14. ಸಕ್ರಿಬಾಯಿ
15. ಬಿ.ನಿಜಾಮ್
16. ಬಿ.ವೆಂಕಟಾಚಲ.
17. ಬಿ.ರಾಜಮ್ಮ
18. ಹನುಮಕ್ಕ
19. ಎಸ್. ಆರ್. ಪಾಂಡುರಂಗಯ್ಯ
20. ಮುಕುಂದರಾವ್
21. ತಿಮ್ಮಣ್ಣ
22. ರಾಮಣ್ಣ
23. ಜಯನಾಯಕ್
24. ಬಿ.ರಾಜಣ್ಣ
25. ದೊಡ್ಡಸೀತಮ್ಮ
26. ಬಿ.ಲಕ್ಕಮ್ಮ
27. ಎ.ಪೆಚ್. ಕೃಷ್ಣ
28. ಎನ್.ವಿ. ವೆಂಕಟೇಶ್
29. ತಿಮ್ಮರಾಯಪ್ಪ
30. ಸಣ್ಣಗೌರಮ್ಮ
31. ಶಿವಮ್ಮ
32. ಕಮಲಮ್ಮ
33. ಜಯಣ್ಣ

ಇ) ಉಳಿದವರುಗಳನ್ನು ಸರ್ಕಾರ ಅಧಿಸೂಚನೆ ಸಂಖ್ಯೆ ಡಿಪಿ.ಎಆರ್ ೨ ಎಸ್ಆರ್ 90 ದಿನಾಂಕ 6-8-90ರ ನಿಯಮಗಳ ಅನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಪಟ್ಟಿಯನ್ನು ಮಂಡಿಸಲಾಯಿತು. ಮಾನ್ಯ ಸಿಂಧ್ಯರವರ ಇವೊತ್ತು ನಿಮ್ಮ ಪುಟ್ಟಿದ ಹಬ್ಬದ ದಿನ, ಆದುದರಿಂದ ಸಭೆಯ ಪರವಾಗಿ ಮತ್ತು ನನ್ನ ಪರವಾಗಿ ತಮಗೆ ಶುಭಕಾಮನೆಗಳನ್ನು ತಿಳಿಸುತ್ತೇನೆ.

ಶ್ರೀಮತಿ ಮೋಟಮ್ಮ : ಇಲ್ಲಿ ತುಂಬಾ ಜನರ ಹುಟ್ಟಿದ ಹಬ್ಬವನ್ನು ಸೆಲಿಬರೇಟ್ ಮಾಡಿದಂತಾಯಿತು. ಆದರೆ ಒಬ್ಬರಿಂದಲೂ ಊಟ ಮತ್ತು ಸ್ವೀಟ್ ಸಿಗಲಿಲ್ಲ.

ಶ್ರೀಕೆ.ಎಸ್. ಈಶ್ವರಪ್ಪ : ಒಳ್ಳೆಯ ಹೂವನ್ನು ಕೊಡುತ್ತಿದ್ದೀರಿ ಕಮಲದ ಹೂವನ್ನು ಕೊಡಬೇಕು.....

ಶ್ರೀ ಎಂ. ಮಹದೇವ್ : ವಿಶೇಷವೇನೆಂದರೆ ಮಾನ್ಯ ಸಿಂಧ್ಯರವರ ಹುಟ್ಟಿದ ಹಬ್ಬದ ದಿನವೇ ಪುಡ್ ಡಿಮ್ಯಾಂಡ್ ಇದೆಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ಕೊನೆಯ ಪಕ್ಷ ಒಂದು ಲಕ್ಷ ರೂಪಾಯಿಯನ್ನು ಬಹುಮಾನವಾಗಿ ಕೊಡುವ ವ್ಯವಸ್ಥೆಯನ್ನಾದರೂ ಮಾಡಿ

ಬರೀ ಹೂವನ್ನು ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ತಮ್ಮ ಅಧಿಕಾರದ ಅವಧಿಯಲ್ಲಿ ಒಂದು ಲಕ್ಷ ರೂಪಾಯಿಯನ್ನು ಕೊಡುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು : ನೀವು ವಿಧಾನ ಸಭೆಯ ಅಧ್ಯಕ್ಷರಾದಾಗ ಅದನ್ನು ಜಾರಿಗೆ ತನ್ನಿ.

## ಚುಕ್ಕೆಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರ ಬರದಿರುವ ಬಗ್ಗೆ ಪ್ರಸ್ತಾಪ

ಶ್ರೀ ಎನ್.ಜಿ. ನಾಯಕ್ : ನಾನು ಲಿಖಿತ ಮೂಲಕ ಕೆಲವು ಪ್ರಶ್ನೆಗಳನ್ನು ಕೇಳಿದ್ದೇನೆ. ಅದಕ್ಕೆ ಉತ್ತರ ಬಂದಿಲ್ಲ. ಚುಕ್ಕೆ ಗುರುತಿನ 5 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಚುಕ್ಕೆ ಗುರುತಿನ ಪ್ರಶ್ನೆಗಳೇ?

ಶ್ರೀ ಎನ್.ಜಿ. ನಾಯಕ್ : ಅಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ.

ಅಧ್ಯಕ್ಷರು : ಅದನ್ನು ತರಿಸಿಕೊಡುವ ವಿಷ್ಣಾಡು ಮಾಡುತ್ತೇನೆ.

+ಶ್ರೀ ಎಸ್. ಯಡಿಯೂರಪ್ಪ : ಚುಕ್ಕೆ ಗುರುತಿನ ಪ್ರಶ್ನೆಗಳಲ್ಲಿ 5-6 ದಿನದಿಂದ ನೋಡುತ್ತಿದ್ದೇನೆ. ಯಾವುದಕ್ಕೂ ಉತ್ತರ ಬರುತ್ತಿಲ್ಲ. ಸದನದಲ್ಲಿ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಅನೇಕ ಪ್ರಶ್ನೆಗಳು ಮುಂದೆಕ್ಕೆ ಹೋಗಿವೆ. ಲಿಖಿತ ಮೂಲಕ ಕೊಡುವ ಉತ್ತರದಲ್ಲಿ ಈವತ್ತು 10-12 ಪ್ರಮುಖವಾದ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇವೆಂದು ತೆಗೆದುಕೊಂಡು ಒಂದಕ್ಕೂ ಉತ್ತರ ಬಂದಿಲ್ಲ.

ಅಧ್ಯಕ್ಷರು : 147 ಪ್ರಶ್ನೆಗಳಲ್ಲಿ 88 ಕ್ಕೆ ಉತ್ತರ ಬಂದಿದೆ. ಉಳಿದ ಪ್ರಶ್ನೆಗಳಿಗೆ....

+ ಶ್ರೀ ಬಿ. ಎಸ್. ಯಡಿಯೂರಪ್ಪ : ಪ್ರಮುಖವಾಗಿರತಕ್ಕ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.ಯಾವುದು ಇಲ್ಲಿ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬಂದು ಚರ್ಚೆಯಾಗಬೇಕಾಗಿತೋ ಅದು ಪರಿವರ್ತನೆಯಾಗಿಯಾದರೂ ಬರಬೇಕಲ್ಲ. ಎಂ.ಪಿ.ಎಂ. ಬಗ್ಗೆ, ರೈತರ ಬಗ್ಗೆ ಪ್ರಮುಖವಾದ ವಿಷಯದ ಬಗ್ಗೆ

ಅಧ್ಯಕ್ಷರು : ಸರ್ಕಾರಕ್ಕೆ ಮತ್ತೊಮ್ಮೆ ಸೂಚನೆಯನ್ನು ಕೊಡುತ್ತೇನೆ. ಲಿಖಿತ ಮೂಲಕ ಬರತಕ್ಕಂತಹ ಪ್ರಶ್ನೆಗಳನ್ನು ಮತ್ತು ಚುಕಕ್ಕೆ ಗುರುತಿನ ಪ್ರಶ್ನೆಗಳನ್ನು ಕೇಳಿದಾಗ ತ್ವರಿತ ಗತಿಯಲ್ಲಿ ನಿಯಮಿತವಾದ ವೇಳೆಯಲ್ಲಿ, ನಿಯಮಿತವಾದ ದಿನದಲ್ಲಿ ಉತ್ತರ ಕೊಡತಕ್ಕಂತಹ ವಿಷ್ಣಾಡನ್ನು ಮಾಡಬೇಕು.

ಶ್ರೀ ಪಾಟಾಳ್‌ನಾಗರಾಜ್ : ಅಧ್ಯಕ್ಷರೆ, ಇದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ಹೇಳಿದ್ದೀನಿ. ಇದೇನು ಮೊದಲ ಸಲವಲ್ಲ ನಮಗೆ ದೊಡ್ಡ ದೊಡ್ಡ ಪುಸ್ತಕಗಳು ಬರುತ್ತವೆ. ನಮ್ಮ ಪ್ರಶ್ನೆಯನ್ನು ನಾವು ಒತ್ತಾಯಿಸಬೇಕೇ ಹೊರತು ಉತ್ತರ ಸಿಗುತ್ತಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಸದನದ ಕಾರ್ಯಕಲಾಪಗಳು ಮುಗಿಯುವುದರೊಳಗಾಗಿ ಅದರೆ 27ನೇ ತಾರೀಕಿನೊಳಗೆ ಯಾವುದಕ್ಕೆ ಉತ್ತರ ಸಿಕ್ಕಿಲ್ಲವೋ ಅದಕ್ಕೆ ಉತ್ತರವನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ಪಾಟಾಳ್‌ನಾಗರಾಜ್ : ಈ ಸದನ ಮುಗಿಸುವುದರೊಳಗೆ ತಾವು ಇದಕ್ಕೆ ಉತ್ತರವನ್ನು ದೊರಕಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು.